ಹೊನ್ನಾಳಿ ಮತ್ತು ಹೊಳೆಹೊನ್ನೂರು ಮಧ್ಯೆ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣ. ಕುರಿತು.

(೯೪೯).ಶ್ರೀ ಡಿ. ಜಿ. ಬಸವನಗೌಡ, (ಹೊನ್ನಾಳಿ)

ಅ) ಶಿವಮೊಗ್ಗ ಜಿಲ್ಲಾ ಹೊನ್ನಾಳಿ ಮತ್ತು ಹೊಳೆಹೊನ್ನೂರು ಮಧ್ಯೆ ಕೋಟೆಹಾಳು ಅಥವಾ ಮಳಲಿ ಗ್ರಾಮಗಳ ಅತ್ತಿರ ತುಂಗಭದ್ರಾನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲು ಸರ್ಕಾರದವರು ಹಿಂದೆಯೇ ಅಂದಾಜು ತಯಾರಿಸಿ ಇದುವರೆಗೂ ಕಾರ್ಯಗತವಾಗದಿರಲು ಕಾರಣವೇನು ?

ಆ) ಹಾಗಿದ್ದಲ್ಲಿ ಈಗಲಾದರೂ ಸರ್ಕಾರದವರು ಆ ಬಗ್ಗೆ ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

ಅ) ೧೯೬೪—೬೫ರ ಅಂದಾಜು ಪಟ್ಟಿಯಲ್ಲಿ ಈ ಕೆಲಸವು ಸೇರಿತ್ತು. ಆದರೆ ಹಣದ ಅಭಾವದಿಂದ ಈ ಕೆಲಸ ಕಾರ್ಯಗತವಾಗಿಲ್ಲ.

ಆ) ಆರ್ಥಿಕ ಲಭ್ಯತೆಗನುಗುಣವಾಗಿ ಇದನ್ನು ಪರಿಶೀಲಿಸಲಾಗುವುದು.

PAPERS LAID ON THE TABLE

SRI A. LAKSHMISAGAR (Minister for law and Parliamentary Affairs) — Sir, on behalf of the Hon'ble Chief Minister I beg to lay on the Table of the House.

Notification no. HD 43 CNA 84, dated 23-2-1984

Grant of exemption for exhibiting 35 mm films by the Principal, Karnataka Regional Engineering College, Suratkal Dakshina Kannada in the College Campus.

as required under Section 22 of the Karnataka Cinemas (Regulation) Act, 1964.

MR. SPEAKER.— Papers laid.

Sri. A. LAKSHMISAGAR (Minister for Law and Parliamentary Affairs).— Sir, on behalf the Hon'ble Minister of State for Transport I beg to lay on the table.

The Annual Administration Report (Part II) of the K.S.R.T.C. for the year 1982-83.

as required under Sub-section (3) of Section 35 of the Road Transport Act, 1950 (central Act 64 of 1950)

MR. SPEAKER.—Papers laid,

PRESENTATION OF PETITION

ಪ್ರವಾಹ ಪೀಡಿತ ಜನರ ತೊಂದರೆಗಳ ಬಗ್ಗೆ ಡಾ. ಡಿ. ಎಚ್. ಮಲ್ದಾರ್ ಅವರು ಸಲ್ಲಿಸಿ ಮಾಡಿರುವ ಅರ್ಜಿ.

SRI MALHARGOUDA S. PATIL.— Sir, I present a petition signed by DR. D. H. Maldar regarding grievances of flood affected people of Sankeshwar.

MR. SPEAKER.— Petition presented the petition stands referred to the Committee on Petitions.

ನಿಯಮ ೩೩೪ ರ ಮೇರೆಗೆ.

ವಿದ್ಯಾ ಇಲಾಖೆಯಲ್ಲಿ ಹಂಗಾಮಿನೌಕರರಾಗಿ ಕೆಲಸ ಮಾಡುತ್ತಿರುವ ೯೦೦ ಜನ ಲೆಕ್ಚರರ್ಸ್‌ಗಳ ಪರಿಸ್ಥಿತಿಯ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮುಖ್ಯವಾದ ವಿಷಯ ಉಪಾಧ್ಯಾಯರ ಬಗ್ಗೆ ಇದೆ. ಮಾನ್ಯ ಮಂತ್ರಿಗಳು ಸಹ ಎದುರುಗಡೆ ಕುಳಿತಿದ್ದಾರೆ. ತಮ್ಮ ಗಮನ ಸೆಳೆಯುವುದ ಕ್ಕೋಸ್ಕರ ಒಂದು ಪ್ರಶ್ನೆಯನ್ನು ಎತ್ತಬೇಕಾಗಿದೆ. ತಾವು ಒಂದು ಆಜ್ಞೆಯನ್ನು ಏನು ಹೊರಡಿಸಿ ದ್ದೀರಿ, ಅದು ಪತ್ರಿಕೆಯಲ್ಲಿ ಬಂದಿದೆ. ಅದರ ಪ್ರಕಾರ ಡಿಎಲ್‌ಆರ್‌ಸಿಗಳನ್ನು ರದ್ದು ಮಾಡಗಿದೆ ಯೆಂದು ತಿಳಿದುಬಂದಿದೆ. ರದ್ದು ಮಾಡುವುದಕ್ಕೆ ಕಾರಣ, ಈ ಡಿ. ಎಲ್.ಆರ್.ಸಿ. ಗಳಲ್ಲಿ ಅವ್ಯವಹಾರ ನಡೆಯುತ್ತಿದೆ, ಲಂಚಗುಳಿತನದಿಂದ ಇದರಲ್ಲಿನ ಸದಸ್ಯರು ಬೇಕಾದಷ್ಟು ಹಣ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ, ಈ ದೋಷಾರೋಪಣೆಗಳು ಬಂದಿದ್ದರಿಂದ ಇವುಗಳನ್ನು ರದ್ದು ಮಾಡಿ ಆಜ್ಞೆ ಹೊರಡಿಸಲಾಗಿದೆ.

ಅಧ್ಯಕ್ಷರು.— ನೀವು ಕಳಿಸಿರುವದು ಜೂನಿಯರ್ ಕಾಲೇಜು ಅಧ್ಯಾಪಕರ ವಿಚಾರದ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.— ದಯವಿಟ್ಟು ಕ್ಷಮಿಸಬೇಕು. ನಾನು ಎರಡೂ ವಿಷಯು ಗಳನ್ನು ಕಳಿಹಿಸಿದ್ದೆ. ಜೂನಿಯರ್ ಕಾಲೇಜ್ ಲೆಕ್ಚರರ್ಸ್ ವಿಷಯು ಬಹಳ ಗಂಭೀರವಾದುದ್ದಾಗಿದೆ. ಸುಮಾರು ಒಂಭೈನೂರು ಜೂನಿಯರ್ ಕಾಲೇಜ್ ಲೆಕ್ಚರರ್ಸ್ ನಮ್ಮ ರಾಜ್ಯದಲ್ಲಿ ಇದ್ದಾರೆ. ಅವರು ಆರು, ಏಳು ಎಂಟು ವರ್ಷಗಳಿಂದ ಈ ಉದ್ಯೋಗ ಮಾಡುತ್ತಿದ್ದಾರೆ. ಇವರುಗಳನ್ನು ಸ್ಥಳೀಯ ಅಭ್ಯರ್ಥಿಗಳೆಂದು ಪರಿಗಣಿಸಲಾಗಿದೆ. ಅವರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ಇಂಟರ್‌ವ್ಯೂ ಮಾಡಿಯೇ ತೆಗೆದುಕೊಂಡಿರುವುದು. ಈಗ ಇವರನ್ನು ಕೈಬಿಟ್ಟು ಆ ಜಾಗಕ್ಕೆ ಪ್ರೊಮೋಷನ್ ವೇಕೆನ್ಸಿಯಲ್ಲಿ ಬೇರೆಯವರನ್ನು ಗೆದುಕೊಳ್ಳಬೇಕೆಂದು ಹೊರಟಿದ್ದಾರೆ. ಇವರನ್ನು ಖಾಯಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇವರಿಗೆ ವಿದ್ಯಾಭ್ಯಾಸ ಇದೆ, ಪರಿ ಶ್ರಮ ಪಟ್ಟಿದ್ದಾರೆ. ಮಾನ್ಯ ಸಚಿವರು ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).— ಜೂನಿಯರ್ ಕಾಲೇಜಿಗೆ ಲೆಕ್ಚರರ್‌ಗಳನ್ನು ನೇರವಾಗಿ ತೆಗೆದುಕೊಳ್ಳುವುದಕ್ಕೆ ಪಿ.ಎಸ್.ಸಿ. ಇಂಟರ್‌ವ್ಯೂಗೆ ಕರೆಯುತ್ತಾರೆ. ಇದರಲ್ಲಿ ಇವರೂ ಕೂಡ ಅರ್ಜಿ ಹಾಕಿಕೊಳ್ಳಬಹುದಾಗಿತ್ತು. ಎರಡನೇಯದಾಗಿ ಪ್ರೋಮೋಷನಲ್ ವೆಕೆನ್ಸಿಯನ್ನು ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಯಾರು ಕೆಲಸ ಮಾಡುತ್ತಿದ್ದಾರೆ, ಅವರಿಗೆ ಕೊಡಬೇಕಾಗಿ ಬರು ತ್ತದೆ. ಇದಕ್ಕೆ ಯಾರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ ಅವರನ್ನು ಆಯ್ಕೆ ಮಾಡುವು ದಕ್ಕೆ ಬರುವುದಿಲ್ಲ. ಇದರ ಬಗ್ಗೆ ಹೈಕೋರ್ಟಿನಲ್ಲಿ ಆ ದೇಶವನ್ನು ಕೊಟ್ಟಿದ್ದಾರೆ. ಒಂದು ಸಮಿತಿ ಯನ್ನು ಪ್ರಕಟಣೆ ಮಾಡಿ ಅದಕ್ಕೆ ಅರ್ಜಿಗಳನ್ನು ಕರೆದು ಅವರನ್ನು ಆಯ್ಕೆ ಮಾಡಬೇಕಂ. ಕೆಲವ ರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ತೆಗೆದುಕೊಂಡು ನೇಮಕ ಮಾಡಿದರೆ ಅದು ಸರಿ ಹೋಗುವುದಿಲ್ಲ. ಡಿ.ಎಲ್.ಆರ್‌ಸಿ. ಮಾಡುವುದಕ್ಕೆ ಆದೇಶ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಯಾರಾದರೂ ಪ್ರೋಮೊಷನಲ್ ವೆಕೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರೆ ಅವರನ್ನು ನೇರವಾಗಿ ನೇಮಕ ಮಾಡುವುದಕ್ಕೆ ಬರುವುದಿಲ್ಲ, ನೇರವಾಗಿ ಅಪಾಯಿಂಟ್ ಮೆಂಟ್ ಮಾಡುವ ಕೆಲಸವನ್ನು ಪಿ.ಎಸ್. ಸಿ. ಮಾಡಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಆರೇಳು ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ ಸ್ವಾಮಿ.

ಶ್ರೀ ಬಿ. ರಾಚಯ್ಯ.—ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅರ್ಜಿ ಕರೆದಿ ದ್ದಾರೆ. ಪಿ.ಎಸ್.ಸಿ. ಯವರು ಇಂಟರ್‌ವ್ಯೂ ಮಾಡುತ್ತಿದ್ದಾರೆ. ಅವರ ಮುಖಾಂತರ ಬರ